# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/1293/2021
ಮಂಡನಾಧಿಕಾರಿಗಳ ಶಾಖೆ, ಎಆರ್‌ಇ-18

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 24/11/2021

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12 (3) ರನ್ವಯ ಶಿಫಾರಸ್ಸು ವರದಿ

ವಿಷಯ: ಶ್ರೀ ಬಸವಂತ್ @ ಬಸವರಾಜ್ ತಂದೆ ಮಾದಪ್ಪ @ ಮಡೆಪ್ಪ ಡಿಗ್ಗೆ, ಮುಖ್ಯ ಕಾರ್ಯನಿರ್ವಾಹಕರು (ಕಾರ್ಯದರ್ಶಿ), ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಜಂಬಗಿ(ಬಿ) ಗ್ರಾಮ, ತಾಲ್ಲೂಕ: ಔರಾದ್(ಬಿ), ಜಿಲ್ಲಾ: ಬೀದರ್ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

*****

1. ಆರಕ್ಷಕ ನಿರೀಕ್ಷಕರು, ಬೀದರ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ಸಲ್ಲಿಸಿದ ವರದಿಯಲ್ಲಿ ಶ್ರೀ ಬಸವಂತ್ @ ಬಸವರಾಜ್ ತಂದೆ ಮಾದಪ್ಪ @ ಮಡೆಪ್ಪ ಡಿಗ್ಗೆ, ಮುಖ್ಯ ಕಾರ್ಯನಿರ್ವಾಹಕರು (ಕಾರ್ಯದರ್ಶಿ), ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಜಂಬಗಿ(ಬಿ) ಗ್ರಾಮ, ತಾಲ್ಲೂಕ: ಔರಾದ್(ಬಿ), ಜಿಲ್ಲಾ: ಬೀದರ್ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದೂರುದಾರರಾದ ಶ್ರೀ ಮಲಗೊಂಡ @ ಮಲ್ಲಿಕಾರ್ಜುನ್ ಬಿನ್ ವಿಶ್ವನಾಥ್ ಬುದರೆ, ಸಾ: ಬಾದಲಗಾಂವ, ತಾ: ನಾರಾಯಣ ಖೇಡ್, ಜಿಲ್ಲೆ: ಮೇದಕ (ತೆಲಂಗಾಣ ರಾಜ್ಯ), ಸದ್ಯ ಜಂಬಗಿ (ಬಿ) ಗ್ರಾಮ, ತಾಲ್ಲೂಕ ಔರಾದ(ಬಿ). ಜಿಲ್ಲೆ: ಬೀದರ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಭೇಟಿ ಮಾಡಿದಾಗ ದೂರುದಾರರ ಕೆಲಸ ಮಾಡಿಕೊಡಲು ಲಂಚದ ಹಣ ಕೇಳಿ

ಪಡೆದುಕೊಂಡು ದುರ್ನಡತೆ ತೋರಿಸಿರುತ್ತಾರೆ ಎಂದು ವರದಿ ಸಲ್ಲಿಸಿದ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7 (2) ರನ್ವಯ ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಳ್ಳಲಾಗಿದೆ.

2. ದೂರಿನ ಸಂಕ್ಷಿಪ್ತ ಸಾರಾಂಶ:- ದೂರುದಾರರ ತಾಯಿಯ ತವರೂರಾದ ಬೀದರಜಿಲ್ಲೆಯ ಔರಾದ(ಬಿ) ತಾಲ್ಲೂಕಿನ ಜಂಬಗಿ(ಬಿ) ಗ್ರಾಮದಲ್ಲಿ ತಮ್ಮ ಸೋದರ ಮಾವನ ಜೊತೆ ತಮ್ಮ ಅಜ್ಜಿಯ ಆರೈಕೆ ಮಾಡಲು ಅಜ್ಜಿಯೊಂದಿಗೆ ವಾಸವಾಗಿರುತ್ತಾರೆ. ಹೀಗಿರುವಾಗ ದೂರುದಾರರ ಅಜ್ಜಿಯಾದ ಶ್ರೀಮತಿ ನರಸಮ್ಮ ಕೋಂ ದಿವಂಗತ ಬಾಪುಗೊಂಡ ಇವರ ಹೆಸರಿನಲ್ಲಿ ಜಂಬಗಿ(ಬಿ) ಗ್ರಾಮದ ಸರ್ವೆ ನಂ:182 ಹಿಸ್ಸಾ ಅ/1ನೇದರಲ್ಲಿ 7 ಎಕರೆ 20 ಗುಂಟೆ ಜಮೀನಿದ್ದು, ಅದರಲ್ಲಿ ತೊಗರಿ ಬೆಳೆಯನ್ನು ಬೆಳೆದಿರುತ್ತಾರೆ. ತೊಗರಿಯನ್ನು ಸರ್ಕಾರದ ಆದೇಶದನ್ವಯ ದೂರುದಾರರು ತೊಗರಿ ಖರೀದಿ ಕೇಂದ್ರದಲ್ಲಿ ಮಾರಾಟ ಮಾಡುವ ಕುರಿತು ಗ್ರಾಮಲೆಕ್ಕಿಗರಿಂದ ತೊಗರಿಬೇಳೆ ಬೆಳೆದ ಬಗ್ಗೆ ದೃಢೀಕರಣ ಪತ್ರ ಪಡೆದು ಜಂಬಗಿ(ಬಿ), ಪಿ.ಕೆ.ಪಿ.ಎಸ್.ನ ಕಾರ್ಯದರ್ಶಿಯಾದ ಎದುರುದಾರ್‌ರವರಿಗೆ ನೀಡಿ ಆನ್‌ಲೈನ್ ನೋಂದಣಿ ಐ.ಡಿ. ಸಂಖ್ಯೆಯನ್ನು ಪಡೆದುಕೊಂಡಿರುತ್ತಾರೆ. ನಂತರ ಅವರು ಬೆಳೆದ 9 ಕ್ವಿಂಟಲ್ ತೊಗರಿಬೇಳೆಯನ್ನು ಮಾರಾಟ ಮಾಡಲು ಎದುರುದಾರರು ಸೂಚಿಸಿದ ದಿ:20/02/2018ರಂದು ಬೆಳಿಗ್ಗೆ 11.30 ಗಂಟೆಯ ಸುಮಾರಿಗೆ ಜಂಬಗಿ ಗ್ರಾಮದ ತೊಗರಿ ಖರೀದಿ ಕೇಂದ್ರಕ್ಕೆ ಒಯ್ಯಲಾಗಿ ಎದುರುದಾರರು ಅವರು ಬೆಳೆದ ತೊಗರಿಯನ್ನು ನಿಗದಿ ಪಡಿಸಿದ ಅಂಶಗಳಿಗನುಗುಣವಾಗಿ ಪರಿಶೀಲಿಸಿ, ಅವರ 9 ಕ್ವಿಂಟಲ್ ತೊಗರಿಯು ಖರೀದಿಗೆ ಯೋಗ್ಯವೆಂದು ತಿಳಿಸಿ, ತೂಕ ಮಾಡಿ ತೆಗೆದುಕೊಂಡಿರುತ್ತಾರೆ.

3. ದೂರುದಾರರು ತೊಗರಿ ಖರೀದಿ ಕೇಂದ್ರಕ್ಕೆ ಮಾರಾಟ ಮಾಡಿದ ತೊಗರಿಯ ಸ್ವೀಕೃತಿ ಕೇಳಲಾಗಿ, ಎದುರುದಾರರು ದೂರುದಾರರಿಂದ ಪಡೆದ ಪ್ರತಿ ಕ್ವಿಂಟಲ್ ತೊಗರಿಗೆ ರೂ.100/-ರಂತೆ ಒಟ್ಟು 9 ಕ್ವಿಂಟಲ್‌ಗೆ ಒಟ್ಟು 900/- ರೂ.ಗಳನ್ನು ಲಂಚವಾಗಿ ಕೊಡಬೇಕೆಂದು ಬೇಡಿಕೆ ಇಟ್ಟಿರುತ್ತಾರೆ. ಆಗ ದೂರುದಾರರು ಸದರಿ

ಹಣಕ್ಕೆ ರಶೀದಿ ಏನಾದರೂ ಕೊಡುತ್ತೀರಾ ಎಂದು ಕೇಳಿದಾಗ ಎದುರುದಾರರು 900/– ರೂ.ಗಳಿಗೆ ಯಾವುದೇ ರಶೀದಿ ಇರುವುದಿಲ್ಲವೆಂದು ಹಾಗೂ ಸದರಿ ಹಣವನ್ನು ನೀಡಿದರೆ ಮಾತ್ರ ತೊಗರಿ ಖರೀದಿಸಿದ ಬಗೆಗಿನ ರಶೀದಿ ಕೊಡುವುದಾಗಿ ತಿಳಿಸಿರುತ್ತಾರೆ. ದೂರುದಾರರು ಸದರಿ ತೊಗರಿ ಖರೀದಿ ಕುರಿತು ಪತ್ರಿಕೆ, ಜನಸಾಮಾನ್ಯರಿಂದ ತಿಳಿದುಕೊಂಡಿದ್ದೇನೆಂದರೆ, ತೊಗರಿ ಖರೀದಿ ಕೇಂದ್ರದ ಯಾವುದೇ ಅಧಿಕಾರಿ ಸಿಬ್ಬಂದಿಯವರಿಗೆ ರೈತರು ಯಾವುದೇ ರೀತಿಯ ಹಣ ನೀಡಬಾರದೆಂದು ಇರುತ್ತದೆ. ಆದರೆ ತೊಗರಿ ಖರೀದಿ ವೇಳೆ ರೈತರಿಂದ ಹಣ ಪಡೆಯುತ್ತಿರುವುದನ್ನು ತಿಳಿದುಕೊಂಡು ಎದುರುದಾರರನ್ನು ದಿ:20/02/2018ರಂದು ಭೇಟಿಯಾದಾಗ ದೂರುದಾರರು ಮಾರಾಟ ಮಾಡಿದ 9 ಕ್ವಿಂಟಲ್ ತೊಗರಿಗೆ ಪ್ರತಿ ಕ್ವಿಂಟಲಗೆ 100/– ರೂ.ರಂತೆ ಒಟ್ಟು 900/– ರೂ.ಗಳ ಬೇಡಿಕೆ ಇಟ್ಟಿರುತ್ತಾರೆ. ಎದುರುದಾರರು ಮತ್ತು ದೂರುದಾರರ ನಡುವೆ ನಡೆದ ಸಂಭಾಷಣೆಯನ್ನು ದೂರುದಾರರು ತಮ್ಮ ಮೊಬೈಲನಲ್ಲಿ ಧ್ವನಿ ಮುದ್ರಿಸಿಕೊಂಡಿರುತ್ತಾರೆ. ಎದುರುದಾರರು ತೊಗರಿ ಖರೀದಿ ಕುರಿತು ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದನ್ನು ದೂರುದಾರರು ತಮ್ಮ ಅಜ್ಜಿಯೊಂದಿಗೆ ಚರ್ಚಿಸಿದಾಗ ಅಜ್ಜಿಯು ಹಣ ನೀಡಬಾರದೆಂದು ತಿಳಿಸಿರುತ್ತಾಳೆ ಮತ್ತು ನ್ಯಾಯಯುತವಾದ ತಮ್ಮ ಅಜ್ಜಿಯ ಕೆಲಸಕ್ಕೆ ಲಂಚವಾಗಿ ಹಣ ನೀಡಲು ಇಷ್ಟವಿಲ್ಲದ್ದರಿಂದ ಅವರು ದಿನಾಂಕ 26/02/2018 ರಂದು ಬೆಳಿಗ್ಗೆ 10 ಘಂಟೆಗೆ ಭ್ರಷ್ಟಾಚಾರ ನಿಗ್ರಹ ದಳ ಬೀದರ ಪೊಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯ ಮುಂದೆ ದೂರು ನೀಡಿದ ಮೇಲೆ ಸದರಿ ಪೊಲೀಸ್ ಠಾಣೆಯಲ್ಲಿ ಮೊ. ಸಂ. 02/2018 ಪಿ.ಸಿ. ಕಾಯಿದೆ ಕಲಂ 7 ರಡಿ ಎದುರುದಾರರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

4. ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ ಶ್ರೀ ಯೇಸುದಾಸ್ ತಂದೆ ಮಲ್ಲಿಕಾರ್ಜುನ ಘೋರೆ ಮತ್ತು ಶ್ರೀ ಮಹ್ಮದ ಜುಲಖರನ್ಯೆನ ತಂದೆ ಅಬ್ದುಲ್ ಸತ್ತಾರ ತೂಗಾಂವಕರ್ ಇವರನ್ನು ಬರಮಾಡಿಕೊಂಡಿದ್ದು, ಅವರುಗಳ ಪರಿಚಯ ಮಾಡಿಕೊಂಡು ಹಾಗೂ ದೂರುದಾರರಿಗೆ ಪರಿಚಯಿಸಿದ್ದು ಹೆಚ್ಚಿನ ವಿವರಗಳನ್ನು

ಪಂಚರು ದೂರುದಾರರನ್ನು ವಿಚಾರಿಸಿ ತಿಳಿದುಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು ಪ್ರಥಮ ವರ್ತಮಾನ ವರದಿಯನ್ನು ಓದಿಕೊಳ್ಳಲು ತಿಳಿಸಿ ನೀಡಿರುತ್ತಾರೆ. ಎದುರುದಾರರು ಲಂಚಕ್ಕಾಗಿ ಬೇಡಿಕೆ ಇಟ್ಟಿರುವುದು ಕಂಡುಬರುತ್ತದೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಲಂಚದ ಹಣವನ್ನು ಹಾಜರುಪಡಿಸುವಂತೆ ಸೂಚಿಸಿದಾಗ ದೂರುದಾರರು ಲಂಚ ನೀಡಲು ತಂದ (ರೂ. 500/– ಮುಖ ಬೆಲೆಯ 1 ನೋಟು, 100/– ರೂ. ಮುಖಬೆಲೆಯ 4 ನೋಟುಗಳು) ಒಟ್ಟು 900/– ರೂ.ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿರುತ್ತಾರೆ. ನಂತರ ತನಿಖಾಧಿಕಾರಿಗಳ ಸೂಚನೆಯಂತೆ ಸಿಬ್ಬಂಧಿ ಸದರಿ ನೋಟುಗಳಿಗೆ ಪಿನಾಪ್ತಲಿನ್ ಪೌಡರನ್ನು ಸವರಿದ್ದು, ಪಂಚ ಸಾಕ್ಷಿ-2 ರವರಿಂದ ದೂರುದಾರರ ಅಂಗ ಶೋಧನೆ ಮಾಡಿದ್ದು ದೂರುದಾರರ ಪ್ಯಾಂಟಿನ ಬಲಜೇಬಿನಲ್ಲಿ ಯಾವುದೇ ವಸ್ತುಗಳು ಇರುವುದಿಲ್ಲವೆಂದು ಖಾತ್ರಿಪಡಿಸಿಕೊಂಡು ನಂತರ ಪಿನಾಪ್ತಲಿನ್ ಪೌಡರ್ ಸವರಿದ ಕರೆನ್ಸಿ ನೋಟುಗಳನ್ನು ಪಂಚ 2 ರವರಿಗೆ ಎಣಿಕೆ ಮಾಡಿ ಪರಿಶೀಲಿಸುವಂತೆ ಹೇಳಿ ನೀಡಿದ್ದು ಅದರಂತೆ ಅವರು ಸದರಿ ನೋಟುಗಳನ್ನು ಪರಿಶೀಲಿಸಿ ಎಣಿಕೆ ಮಾಡಿ ತನಿಖಾಧಿಕಾರಿಯವರ ಸೂಚನೆಯಂತೆ ಸದರಿ ನೋಟುಗಳನ್ನು ದೂರುದಾರರ ಪ್ಯಾಂಟಿನ ಬಲ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ನೋಟುಗಳನ್ನು ಎಣಿಕೆ ಮಾಡಿದ ಪಂಚ 2 ರವರ ಎರಡೂ ಕೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೊಳೆಸಿದಾಗ, ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ದೂರುದಾರರು ಹಾಜರುಪಡಿಸಿದ ಧ್ವನಿ ಮುದ್ರಿಸಿಕೊಂಡ ಸಂಭಾಷಣೆಯುಳ್ಳ ಮೊಬೈಲ್‌ನ್ನು ತನಿಖಾಧಿಕಾರಿಗಳು ಪಂಚರ ಮುಂದೆ ನುಡಿಸಿ ಕೇಳಿಸಿ ಮೊಬೈಲ್‌ನಲ್ಲಿನ ಸಂಭಾಷಣೆಯನ್ನು ಒಂದು ಸಿ.ಡಿ.ಯಲ್ಲಿ ಮರು ಮುದ್ರಿಸಿ ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ. ತನಿಖಾಧಿಕಾರಿಗಳು ತಮ್ಮ ಕಛೇರಿಯ ಅಲ್ಮೆರಾದಲ್ಲಿದ್ದ ವಾಯ್ಸ್ ರೆಕಾರ್ಡರ್‌ನ್ನು ದೂರುದಾರರಿಗೆ ನೀಡಿ ಎದುರುದಾರರನ್ನು ಕಾಣಲು ಹೋದಾಗ ಲಂಚ ಕೊಡುವ ಸಮಯದಲ್ಲಿ ಅವರೊಂದಿಗೆ ನಡೆಯುವ ಸಂಭಾಷಣೆಯನ್ನು ಧ್ವನಿ ಮುದ್ರಿಸಿಕೊಳ್ಳಲು ತಿಳಿಸಿ

ನಂತರ ತಾವು ಕೇಳಿದಾಗ ಹಾಜರುಪಡಿಸುವಂತೆ ತಿಳಿಸಿ ವಾಯ್ಸ್ ರೆಕಾರ್ಡರನ್ನು ಉಪಯೋಗಿಸುವ ವಿಧಿ ವಿಧಾನಗಳನ್ನು ತಿಳಿಸಿ ದೂರುದಾರರ ವಶಕ್ಕೆ ನೀಡಿರುತ್ತಾರೆ. ತನಿಖಾಧಿಕಾರಿಗಳು ನೆರಳು ಸಾಕ್ಷಿಯಾದ ಪಂಚ 1 ರವರಿಗೆ ದೂರುದಾರರೊಂದಿಗೆ ಎದುರುದಾರರನ್ನು ಕಾಣಲು ಹೋಗಿ ಅಲ್ಲಿಯೇ ಹತ್ತಿರದಲ್ಲಿ ನಿಂತು ದೂರುದಾರ ಮತ್ತು ಎದುರುದಾರರ ನಡುವೆ ನಡೆಯುವ ಎಲ್ಲಾ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗಮನಿಸಿ ನೋಡಿ ಸಂಭಾಷಣೆ ಕೇಳಿಸಿಕೊಂಡು ನಂತರ ತಮಗೆ ತಿಳಿಸಬೇಕೆಂದು ಸೂಚಿಸಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರಿಗೆ ಎದುರುದಾರರು ಲಂಚದ ಹಣವನ್ನು ಯಾರ ಹತ್ತಿರ ಕೊಡು ಎನ್ನುತ್ತಾರೆ ಅಥವಾ ಎಲ್ಲಿ ಇಡು ಎಂದು ಹೇಳುತ್ತಾರೆ ಲಂಚದ ಹಣವನ್ನು ಸ್ವೀಕರಿಸಿದ ಬಳಿಕ ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಗಮನಿಸಿಕೊಂಡು ನಂತರ ಹೊರ ಬಂದು ತಮ್ಮ ಮುಖವನ್ನು ಕರವಸ್ತ್ರದಿಂದ ಒರೆಸಿಕೊಳ್ಳುವುದರ ಮೂಲಕ ನಿಗದಿತ ಸನ್ನೆಯನ್ನು ನೀಡುವಂತೆ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಎಲ್ಲರಿಗೂ ಸೋಪಿನಿಂದ ಕೈಗಳನ್ನು ತೊಳೆದುಕೊಳ್ಳಲು ತಿಳಿಸಿ ತಾನೂ ಸಹ ಸೋಪಿನಿಂದ ಕೈಗಳನ್ನು ತೊಳೆದುಕೊಂಡಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆಸಿ ದಿ: 26/02/2018 ರಂದು ಬೆಳಿಗ್ಗೆ 11–45 ಘಂಟೆಯಿಂದ ಮಧ್ಯಾಹ್ನ 12–15 ಘಂಟೆಯವರೆಗೆ ಬೀದರ ಎಸಿಬಿ ಕಛೇರಿಯಲ್ಲಿ ಲ್ಯಾಪ್‌ಟಾಪ್ ಮೂಲಕ ಗಣಕೀಕರಣ ಮಾಡಿದ್ದ ಪ್ರಾಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

5. ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯಪೂರ್ವ ನಡವಳಿಕೆಗಳನ್ನು ನಡೆಸಿದ ನಂತರ ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂದಿಯವರೊಂದಿಗೆ ಇಲಾಖಾ ವಾಹನದಲ್ಲಿ ಹೊರಟು ಎದುರುದಾರರು ಕರ್ತವ್ಯ ನಿರ್ವಹಿಸುವ ಕಛೇರಿಯ ಹತ್ತಿರ ವಾಹನವನ್ನು ಮರೆಯಾಗಿ ನಿಲ್ಲಿಸಿ, ದೂರುದಾರರಿಗೆ ಮತ್ತು ನೆರಳುಸಾಕ್ಷಿಯಾದ ಶ್ರೀ ಯೇಸುದಾಸರವರಿಗೆ ಪ್ರಾಯೋಗಿಕ ಪಂಚನಾಮೆ ಕಾಲದಲ್ಲಿ ನೀಡಿದ ಸೂಚನೆಗಳನ್ನು ಮರುಜ್ಞಾಪಿಸಿ ಕಳುಹಿಸಿಕೊಟ್ಟಿದ್ದು ಅದರಂತೆ ಅವರಿಬ್ಬರೂ ಎದುರುದಾರರು

ಕಾರ್ಯನಿರ್ವಹಿಸುತ್ತಿದ್ದ ಕಛೇರಿಗೆ ಬಂದು ಎದುರುದಾರರನ್ನು ಭೇಟಿಯಾಗಿ ತಮ್ಮ ತೊಗರಿ ಮಾರಾಟ ಮಾಡಿದ ಬಗೆಗಿನ ಸ್ವೀಕೃತಿ ಕುರಿತು ವಿಚಾರಿಸಿದಾಗ ಎದುರುದಾರರು ತಾನು ಕೇಳಿದಷ್ಟು ಹಣ ತಂದಿರುವೆಯಾ ಎಂದು ಕೇಳಿದಾಗ ದೂರುದಾರರು ತಂದಿರುತ್ತೇನೆ ಎಂದು ಹೇಳಿದಾಗ ಎದುರುದಾರರು ಪುನ: ಲಂಚದ ಹಣಕ್ಕೆ ಒತ್ತಾಯಿಸಿದಾಗ ದೂರುದಾರರು ಪ್ರಾಯೋಗಿಕ ಪಂಚನಾಮೆ ಕಾಲದಲ್ಲಿ ಅವರಿಗೆ ನೀಡಿದ ಫಿನಾಪ್ತಲಿನ ಪುಡಿ ಲೇಪಿತ ಒಟ್ಟು 900/- ರೂ.ಗಳನ್ನು ನೀಡಿದಾಗ ಎದುರುದಾರರು ತಮ್ಮ ಬಲಗೈನಿಂದ ಸ್ವೀಕರಿಸಿ ಎರಡು ಕೈಗಳಿಂದ ಎಣಿಸಿಕೊಂಡು ಲಂಚದ ಹಣವನ್ನು ತಮ್ಮ ಶರ್ಟಿನ ಎಡ ಎದೆಯ ಜೇಬಿನಲ್ಲಿಟ್ಟುಕೊಂಡಿರುತ್ತಾರೆ. ನಂತರ ಅವರಿಗೆ ಅವರ ತೊಗರಿ ಮಾರಾಟ ಮಾಡಿದ ಸ್ವೀಕೃತಿಯನ್ನು ನೀಡಿರುತ್ತಾರೆ. ಆಮೇಲೆ ದೂರುದಾರರು ಕಛೇರಿಯಿಂದ ಹೊರಗೆ ಬಂದು ಪ್ರಾಯೋಗಿಕ ಪಂಚನಾಮೆ ಕಾಲದಲ್ಲಿ ತಿಳಿಸಿದಂತೆ ಮುಖವನ್ನು ತಮ್ಮ ಹತ್ತಿರವಿದ್ದ ಕರವಸ್ತ್ರದಿಂದ ಒರೆಸಿಕೊಳ್ಳುವ ಮೂಲಕ ಮರೆಯಲ್ಲಿ ನಿಂತಿದ್ದ ತನಿಖಾಧಿಕಾರಿಗಳಿಗೆ ಸಂಜ್ಞೆ ನೀಡಿರುತ್ತಾರೆ. ಆಗ ತನಿಖಾಧಿಕಾರಿಯವರು ಅಲ್ಲಿಗೆ ಬಂದು ತಮ್ಮ ಪರಿಚಯವನ್ನು ಎದುರುದಾರರಿಗೆ ಮಾಡಿಸಿಕೊಂಡು ಎದುರುದಾರರ ಬಲಗೈ ಬೆರಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಅದೇ ರೀತಿ ಎಡಗೈ ಬೆರಳುಗಳನ್ನು ಇನ್ನೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ತನಿಖಾಧಿಕಾರಿಗಳು ಸದರಿ ದ್ರಾವಣವನ್ನು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಂದ ಸ್ವೀಕರಿಸಿದ ಲಂಚದ ಹಣವನ್ನು ಎಲ್ಲಿ ಇಟ್ಟುಕೊಂಡಿದ್ದೀರಾ ಎಂದು ಕೇಳಿದ್ದಕ್ಕೆ ಅವರು ಲಂಚದ ಹಣವನ್ನು ತಮ್ಮ ಶರ್ಟಿನ ಎಡ ಎದೆಯ ಜೇಬಿನಲ್ಲಿ ಇಟ್ಟುಕೊಂಡಿರುವುದಾಗಿ ತಿಳಿಸಿದಾಗ ತನಿಖಾಧಿಕಾರಿಗಳು ಪಂಚ 2 ರವರ ಮೂಲಕ ಎದುರುದಾರರು ಧರಿಸಿಕೊಂಡಿದ್ದ ಶರ್ಟಿನ ಎಡ ಎದೆಯ ಜೇಬಿನಲ್ಲಿನ ಹಣವನ್ನು ತೆಗೆಯಿಸಿ ಪರಿಶೀಲಿಸುವಂತೆ ತಿಳಿಸಿದಾಗ ಅವರು ಅವುಗಳನ್ನು

ಪರಿಶೀಲಿಸಿ ತಾಳೆಯಾಗಿರುತ್ತವೆ ಎಂದು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಸದರಿ ಹಣವನ್ನು ಪಂಚರ ಸಮಕ್ಷಮ ಅಮಾನತ್ ಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ಬೇರೆ ಶರ್ಟಿನ ವ್ಯವಸ್ಥೆ ಮಾಡಿ ಲಂಚದ ಹಣವನ್ನು ಇಟ್ಟುಕೊಂಡಿದ್ದ ಶರ್ಟನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಬೇಕಾಗಿರುವುದರಿಂದ ಸದರಿ ಶರ್ಟಿನ ಎಡ ಎದೆಯ ಜೇಬನ್ನು ಒಳ ಮುಖ ಮಾಡಿ ಅದ್ದಿಸಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ನಂತರ ಶರ್ಟಿನ ಜೇಬನ್ನು ಒಣಗಿಸಿ ಶರ್ಟನ್ನೂ ಮತ್ತು ದ್ರಾವಣವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ದೂರುದಾರರಿಗೆ ವಹಿಸಿಕೊಡುವ ಪಂಚನಾಮೆ ಕಾಲಕ್ಕೆ ಎದುರುದಾರರು ಲಂಚ ಪಡೆಯುವಾಗ ನಡೆಯುವ ಸಂಭಾಷಣೆಯನ್ನು ಧ್ವನಿ ಮುದ್ರಿಸಿಕೊಳ್ಳಲು ತಿಳಿಸಿಕೊಟ್ಟಿದ್ದ ವಾಯ್ಸ್ ರೆಕಾರ್ಡರನ್ನು ಹಾಜರುಪಡಿಸಿದ್ದು ಅದನ್ನು ತನಿಖಾಧಿಕಾರಿಗಳು ಆನ್ ಮಾಡಿ ಪಂಚರ ಮುಂದೆ ನುಡಿಸಿ ಕೇಳಿಸಲಾಗಿ ಅದರಲ್ಲಿ ಯಾವುದೇ ಧ್ವನಿ ಮುದ್ರಿತವಾಗಿರುವುದಿಲ್ಲ. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ನಡೆದ ಘಟನೆ ಬಗ್ಗೆ ಸ್ವ ಇಚ್ಛಾ ಹೇಳಿಕೆಯನ್ನು ಬರೆದುಕೊಡಲು ಕೇಳಿದ ಮೇರೆಗೆ ಎದುರುದಾರರು ಸ್ವ ಇಚ್ಛಾ ಹೇಳಿಕೆಯನ್ನು ಬರೆದುಕೊಟ್ಟಿದ್ದು ಅದರಲ್ಲಿ "ಶ್ರೀ ಮಲ್ಲಗೊಂಡ್ ಅಲಿಯಾಸ್ ಮಲ್ಲಿಕಾರ್ಜುನ್ ರವರು ಮೊದಲು ತನ್ನಿಂದ ರೂ. 900/- ಹಣ ಪಡೆದಿದ್ದು, ಆ ಹಣ ಇಂದು ದಿ: 26/02/2018 ರಂದು ಮರಳಿ ಕೊಡುತ್ತಿದ್ದಾರೆ, ನಾನು ನನ್ನ ಕಛೇರಿ ಕೆಲಸಕ್ಕೆ ಹಣ ಪಡೆದಿರುವುದಿಲ್ಲ" ಎಂದು ಬರೆದುಕೊಟ್ಟಿರುತ್ತಾರೆ. ಎದುರುದಾರರು ಬರೆದುಕೊಟ್ಟ ಸ್ವ ಇಚ್ಛಾ ಹೇಳಿಕೆಯನ್ನು ಪಂಚರಿಗೆ ತೋರಿಸಿ ಅಭಿಪ್ರಾಯ ಕೇಳಿದಾಗ ಪಂಚರು ಎದುರುದಾರರು ಬರೆದುಕೊಟ್ಟ ಸ್ವ ಇಚ್ಛಾ ಹೇಳಿಕೆಯು ಸುಳ್ಳೆಂಬ ಅಭಿಪ್ರಾಯಕ್ಕೆ ಬಂದಿರುತ್ತಾರೆ. ನಂತರ ತನಿಖಾಧಿಕಾರಿಗಳು ಸ್ವ ಇಚ್ಛಾ ಹೇಳಿಕೆ ಬಗ್ಗೆ ದೂರುದಾರರನ್ನು ಕೇಳಿದಾಗ ಅವರು ಸ್ವ ಇಚ್ಛಾ ಹೇಳಿಕೆ ಸುಳ್ಳಿದ್ದು ಎದುರುದಾರರು ತನಗೆ ತೊಗರಿ ಮಾರಾಟ ಮಾಡಿದ ರಸೀದಿ ಕೊಡಲು ರೂ. 900/- ಗಳ ಲಂಚದ ಹಣಕ್ಕೆ ಒತ್ತಾಯಿಸಿ ತನ್ನಿಂದ ಸ್ವೀಕರಿಸಿಕೊಂಡಿರುತ್ತಾರೆ ಎಂದು

ತಿಳಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ಹಂತ ಹಂತವಾಗಿ ಫೋಟೋ ತೆಗೆದಿರುತ್ತಾರೆ. ತನಿಖಾಧಿಕಾರಿಗಳು ಲಂಚದ ಹಣದ ಸಮೇತ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ.

6. ಎದುರುದಾರರಿಗೆ ದಿನಾಂಕ 19/07/2021 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು.

7. ಎದುರುದಾರರು ತಮ್ಮ ಸಮಜಾಯಿಷಿಯನ್ನು ದಿನಾಂಕ 03/09/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ ಎದುರುದಾರರು ಪಿ.ಕೆ.ಪಿಎಸ್. ಕಾರ್ಯದರ್ಶಿ ಅಂತ ಖಾಯಂ ನೌಕರಿಯಲ್ಲಿ ಇರುವುದಿಲ್ಲ. ಮತ್ತು ಪಿಂಚಣಿ ಸಹ ಇರುವುದಿಲ್ಲ. ನನ್ನ ನೌಕರಿ 9 ತಿಂಗಳು ಮಾತ್ರ ಇರುತ್ತದೆ ಎಂದು ಹೇಳಿ ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗೆಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

8. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲೀನ್ ಅಂಶ ಇವುಗಳನ್ನು ಪರಿಶೀಲಿಸಿದಾಗ ಶ್ರೀಮತಿ ನರಸಮ್ಮ ಕೋಂ ದಿವಂಗತ ಬಾಪುಗೊಂಡ ಇವರ ಹೆಸರಿನಲ್ಲಿ ಜಂಬಗಿ(ಬಿ) ಗ್ರಾಮದ ಸರ್ವೆ ನಂ:182 ಹಿಸ್ಸಾ ಅ/1ನೇದರಲ್ಲಿ 7 ಎಕರೆ 20 ಗುಂಟೆ ಜಮೀನಿದ್ದು, ಸದರಿ ಜಮೀನಿನ ಎಲ್ಲಾ ವ್ಯವಹಾರಗಳನ್ನು ಅವರ ಮೊಮ್ಮಗನಾದ ದೂರುದಾರರು ನೋಡಿಕೊಳ್ಳುತ್ತಾರೆ. ಸದರಿ ಜಮೀನಿನಲ್ಲಿ ತೊಗರಿ ಬೆಳೆಯನ್ನು ಬೆಳೆದಿರುತ್ತಾರೆ. ತೊಗರಿಯನ್ನು ಸರ್ಕಾರದ ಆದೇಶದನ್ವಯ ಅವರು ತೊಗರಿ ಖರೀದಿ ಕೇಂದ್ರದಲ್ಲಿ ಮಾರಾಟ ಮಾಡುವ ಕುರಿತು ಗ್ರಾಮಲೆಕ್ಕಿಗರಿಂದ ತೊಗರಿಬೇಳೆ ಬೆಳೆದ ಬಗ್ಗೆ ದೃಢೀಕರಣ ಪತ್ರ ಪಡೆದು ಜಂಬಗಿ(ಬಿ), ಪಿ.ಕೆ.ಪಿಎಸ್.ನ ಮುಖ್ಯ ಕಾರ್ಯ ನಿರ್ವಾಹಕರಾದ (ಕಾರ್ಯದರ್ಶಿಯಾದ) ಎದುರುದಾರರಿಂದ ಆನ್ ಲೈನ್ ನೋಂದಣಿ ಐಡಿ

ಸಂಖ್ಯೆಯನ್ನು ಪಡೆದುಕೊಂಡಿರುತ್ತಾರೆ. ನಂತರ ಸದರಿ ಜಮೀನಿನಲ್ಲಿ ಬೆಳೆದ 9 ಕ್ವಿಂಟಲ್ ತೊಗರಿ ಬೆಳೆಯನ್ನು ಎದುರುದಾರರು ಪರಿಶೀಲಿಸಿ 9 ಕ್ವಿಂಟಲ್ ತೊಗರಿಯು ಖರೀದಿಗೆ ಯೋಗ್ಯವೆಂದು ತಿಳಿಸಿ ತೂಕ ಮಾಡಿಸಿ ತೆಗೆದುಕೊಂಡಿರುತ್ತಾರೆ. ದೂರುದಾರರು ನಂತರ ಸದರಿ ತೊಗರಿ ಖರೀದಿ ಕೇಂದ್ರಕ್ಕೆ ಮಾರಾಟ ಮಾಡಿದ ತೊಗರಿಯ ಸ್ವೀಕೃತಿ ಕೇಳಲಾಗಿ ಎದುರುದಾರರು ನಮ್ಮಿಂದ ಪಡೆದ ಪ್ರತಿ ಕ್ವಿಂಟಲ್ ತೊಗರಿಗೆ ರೂ. 100/- ರಂತೆ ಒಟ್ಟು 9 ಕ್ವಿಂಟಲ್ ತೊಗರಿಗೆ ಒಟ್ಟು ರೂ. 900/- ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟು ದೂರುದಾರರಿಗೆ ಒತ್ತಾಯಿಸಿ ದಿ: 26/02/2018ರಂದು 12-45 ಘಂಟೆಗೆ ಬೀದರ ಜಿಲ್ಲೆಯ ಔರಾದ್ ತಾಲ್ಲೂಕಿನ ಜಂಬಗಿ(ಬಿ) ಗ್ರಾಮದ ಪಿ.ಕೆ.ಪಿ.ಎಸ್. ಕಛೇರಿಯಲ್ಲಿ ದೂರುದಾರರಿಂದ ಲಂಚದ ಹಣವಾದ ರೂ. 900/- ಗಳನ್ನು ನೆರಳು ಸಾಕ್ಷಿರವರ ಸಮಕ್ಷಮ ಕೇಳಿ ಪಡೆದುಕೊಂಡಿದ್ದು, ತಮ್ಮ ಕರ್ತವ್ಯದಲ್ಲಿ ನೀತಿ ನಿಷ್ಠೆಯನ್ನು ಪಾಲಿಸದೇ ಕರ್ತವ್ಯದಲ್ಲಿ ಶ್ರದ್ಧೇ ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

9. ಈ ಮೇಲ್ಕಂಡ ಅಂಶಗಳಿಂದಾಗಿ ಎದುರುದಾರರಾದ ಶ್ರೀ ಬಸವಂತ್ @ ಬಸವರಾಜ್ ತಂದೆ ಮಾದಪ್ಪ @ ಮಡೆಪ್ಪ ಡಿಗ್ಗೆ, ಮುಖ್ಯ ಕಾರ್ಯನಿರ್ವಾಹಕರು (ಕಾರ್ಯದರ್ಶಿ), ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಜಂಬಗಿ(ಬಿ) ಗ್ರಾಮ, ತಾಲ್ಲೂಕ: ಔರಾದ್(ಬಿ), ಜಿಲ್ಲಾ: ಬೀದರ್ ಇವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

10. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

20/11/21

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.